(679)

Daily & Weekly SATYAVADI Oldest Newspaper of Mysore ವಾರದ ಸಂಚಿಕೆ Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 289] ಶನಿವಾರ 24—4—1943 [6 ಪೈ

ಡಿಫೆನ್ಸ್ ಅಫ್ ಇಂಡಿಯಾ ಆಕ್ಟ್

ಜನ್ಸೂರಿಗೆ ಭಂಡಾರಿಲಾಲ್ ಶರ್ಮಾ 14 ಮಂದಿ ಪೋಲೀಸು ನೌಕರರು 1942 ನೇ ಡಿಸೆಂಬರ್ 22 ನೇ ತಾರೀಖು ನ್ಯಾಯಬಾಹಿರವಾಗಿ ಜಮಾಯಿಸಿ ಕೊಂಡು, ಕೆಲವು ಮಂದಿ ಪೋಲೀಸ್ ನೌಕರರನ್ನು ಹೊಡೆದೊಡಿದು ಮಾಡಿದ ರೆಂದೂ, ಪೋಲೀಸ್ ನೌಕರರು ಕಲಸಬಿಟ್ಟು ದಿಂಸುಗಳನ್ನು ಜಾಟು ಬನ್ನಿರಬ್ಬೇ ಕೆಂದು ಆಶ್ವಾಸನವಿತ್ತರೆಂದೂ, ಅವರ ಮೇಲೆ ಅಪಾದನೆ ಹೊರಿಸಲ್ಪಟ್ಟಿತ್ತು. ಸ್ಪೆಷಲ್ ಜಡ್ಜರು ವಿಚಾರಣೆ ನಡೆಸಿ, ಆರ್ಡಿನೆನ್ಸಿನ ಅಧಿಕಾರದಮೇಲೂ, ಡಿಫೆನ್ಸ್ ಶಾಸನ, ಇಂಡಿಯನ್ ಪೀನಲ್ ಕೋಡಿನ ಹಲವು ವಿಧಿಗಳ ಅಧಿಕಾರದ ಮೇಲೂ ಇವರಿಗೆ ತಲಾ 2 ವರ್ಷ ಕಠಿಣ ಸಜಾ ವಿಧಿಸಿದರು. ಕಲ್ಕತ್ತಾ ಹೈ ಕೋರ್ಟಿನ ಫೀಫ್ ಜಡ್ಜಿಯರೂ ಮತ್ತು ಇನ್ನಿಬ್ಬರು ಜಡ್ಜಿಯವರೂ ಎಲ್ಲರನ್ನೂ ಬಿಡುಗಡೆ ಮಾಡಿ, ಮತ್ತು ಅವರನ್ನು ಸಾಮಾನ್ಯ ಕಾನೂನುಗಳ ಆಧಾರದ ಮೇಲೆ ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಮಾಡಬೇಕೆಂದು ಆಜ್ಞಾಪಿಸಿದರು. ಸರ್ಕಾರದವರು ಫೆಡರಲ್ ಕೋರ್ಟಿಗೆ ಅಪೀಲು ಮಾಡಿದರೆಂದು ತಿಳಿಯಬಂದಿದೆ.

"ಬಣ್ಣದವರಿಗೆ" ಕೆಲಸವಿಲ್ಲ!

ಲಾಹೋರಿನ ಒಬ್ಬ ತರುಣ ಡಾಕ್ಟರು. ಇವನು ಪಾಸ್ ಮಾಡಿರುವುದು ಎಂ. ಡಿ., ಬಿ. ಸಿ ಹೆಚ್, ಎಂ. ಆರ್. ಸಿ ಎಸ್, ಎಲ್. ಆರ್. ಸಿ. ಪಿ. ಈತನು ಕೆಲಸಕ್ಕೆ ಅರ್ಜಿ ಹಾಕಿದ. ಕೆಲಸಕ್ಕೆ ಒಂಬಹುದೆಂದೂ ಸರ್ಜರಿ ಮತ್ತು ಲೆಪ್ಟಿನೆಂಟು ಹುದ್ದೆ ಕೊಟ್ಟೆದೆಯೆಂದೂ ತಿಳಿಸಿದರು. 3 ದಿವಸಗಳನಂತರ ತಾವು ಕೊಟ್ಟ ಆರ್ಡರನ್ನು ವಜಾ ಮಾಡಿಕೊಂಡಿರುವದಾಗಿ ತಿಳಿಸಿದರು. ವಿಚಾರಿಸಿದಲ್ಲಿ ರಾಯಲ್ ನೇವಿಗೆ ಯೂರೋಪಿಯನ್ ರಕ್ತದವರನ್ನೇ ಸೇರಿಸಬೇಕೆಂದು ಆಜ್ಞೆಯಿದೆಯಂತೆ! ನೋಡಿದಿರಾ!

ಉತ್ಕೃಷ್ಟವಾದ ಹಿಂಗು ಊಟವು ರುಚಿಕರವಾಗಬೇಕಾದರೆ, ಸಂಪೂರ್ಣ ಆರೋಗ್ಯವೂ ಸೌಖ್ಯವೂ ದೊರೆಯಲು



TG. ಮಾರ್ಕಿನ ಹಿಂಗನ್ನು ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ಪುನಃ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

ಯುದ್ಧವಾರ್ತೆ

ರಷ್ಯನರು ನವೊರಸಿಸ್ಕನ್ನು ಪ್ರವೇಶಿಸಿದರೆಂದು ಜರ್ಮನಿಯು ವರದಿ.

ಟ್ಯುನಿಸಿಯಾದಲ್ಲಿ ಟಾರ್ಕೂನನ್ನು ಬ್ರಿಟಿಷರು ಆಕ್ರಮಿಸಿದರು ಇದು ಜರ್ಮನರ ಮಿಲಿಟರಿ ಕೇಂದ್ರ ಕಛೇರಿಯಾಗಿತ್ತು. ಇಲ್ಲಿಂದ ಟ್ಯೂನಿಸ್ಸಿಗೆ ಮಾರ್ಗವಾಗಿದೆ ಇಲ್ಲಿ ಅನೇಕ ಜರ್ಮನರು ಹತರಾದರಲ್ಲದೆ ಅನೇಕರು ಸರೆ ಪಿಡಿಯಲ್ಪಟ್ಟರು.

ರಷ್ಯಾದ ಕೂರ್ಸ್ಕಿನಲ್ಲಿ ಬಲವಾದ ಕದನ ಜರುಗುತ್ತಿದೆ. ಇಲ್ಲಿ ಪೆಟ್ರೋಲ್ ಸಂಚಾರ ಥಾಳಿ ಇರುವದರಿಂದ ಹೆಚ್ಚೇನೂ ನಡೆದಿಲ್ಲ.

ಅಮೆರಿಕ ವಿಮಾನಗಳು ಜಪಾನೀಯರ ಗಿಲ್ಬರ್ ಮಾರ್ಗವಿಲ್, ಕಿಸ್ಕಾ ಮೇಲೆ ಥಾಳಿ ಮಾಡಿರುವವು.

ರೋಮೆಲ್ಲನಿಗೆ ಮುಲೇರಿಯಾ ಜ್ವರವಂತೆ, ಬುದ್ಧಿಭ್ರಮಣೆಯಂತೆ, ಜರ್ಮನಿಯಲ್ಲಿಯೇ ಇರುವನಂತೆ, ಎಂಬದಾಗಿ ಅಮೆರಿಕಾ ವಾರ್ತೆ ತಿಳಿಸುತ್ತದೆ.

ವಿವಿಧ ವರ್ತಮಾನ

ಮೇ 5 ರಿಂದ ಬೊಂಬಾಯಿನಲಿ ರೇಷನಿಂಗ್ ಜಾರಿಗೆ ಒರುವುದರಿಂದ ಇದೇ 23 ರಿಂದ ಯಾರೂ ರೈಲಸಲ್ಲಾಗಲಿ ಇಲ್ಲವೇ ಇನ್ಯಾವ ಮಾರ್ಗದಲ್ಲೇ ಆಗಲಿ ಬೊಂಬಾಯಿನಲ್ಲಿ ರೇಷನ್ ಮಾಡಿರುವ ಪದಾರ್ಥಗಳನ್ನು ತರಕೂಡದೆಂದು ಆಜ್ಞೆಯಾಗಿದೆ.

ಕರಾಚಿಯಲ್ಲಿ ಒಂದು ರೂಪಾಯಿಗೆ 7 ಪೌಂಡು ಬ್ರೆಡ್ಡನ್ನು ಮಾರಲು ಸರ್ಕಾರವ ಆಜ್ಞೆಯಾಗಿದೆ,

ಮುಜಫರ್‌ದ ಒಂದು ಹಳ್ಳಿಯ ಇಬ್ಬರು ಮಹಿಳೆಯರು 4 ರೂಪಾಯನ್ನು ತೆಗೆದುಕೊಂಡು ಜಲಾಹಕ್ಕೆ ಹೋದರು. ಅಲ್ಲಿ ಆ ಬೆಲೆಗೆ ನೀರೆ ಸಿಕ್ಕಕೆಯಲ್ಲವಾಗಿ ವಾರಿಯಲ್ಲಿ ಥಾವಿಗೆ ಬಿದ್ದು ಪ್ರಾಣ ಕಳೆದುಕೊಂಡರು.

ಇದುವರೆಗೆ ಬ್ರಿಟಿಷ್ ಸಾಮ್ರಾಜ್ಯವು ಯುದ್ಧಕ್ಕೆ ನಾಲ್ಕುವರೆ ಕೋಟಿ ರೂಪಾಯಿ ದಾನ ರೂಪದಿಂದ ಸಂದಿರುತ್ತೆಂದು ಪಾರ್ಲಿಮೆಂಟಿನಲ್ಲಿ ಹೇಳಲಾಗಿದೆ.

ಜಪಾನಿನ 8,00 ಟ್ಕ ನೌಕೆಯು 5000 ಟ್ಕ ಬಾಂಬು ಬಿದ್ದು ನ್ಯೂಗಿನಿ ಒಳನೀರಿನ ಪಾಲಾಯಿತು.

ಈಚೆಗೆ ಮ || ವೆಂಡಲ್ ವಿಲ್ಕಿಯವರು ಒರೆದ 'ಏಕ ವಿಶ್ವ' ವನ್ನು ಫಾಕ್ಸ್ ಕಂಯನಿಯವರು ಫಿಲ್ಮಂ ತೆಗೆಯುವರೆಂದು ಗೊತ್ತಾಗಿದೆ.

ಜರ್ಮನಿಯು ಸಬ್ ಮೆರೀನಿನ ಹಾವಳಿ ತಪ್ಪಿಸಲು ಒಂದು ಬಗೆಯ ಆಯುಧವನ್ನು ಕಂಡುಹಿಡಿದಿರುವೆನೆಂದೂ ಅದು ಏನೆಂಬುದನ್ನು ಈಗ ಪ್ರಕಟಿಸುವುದಿಲ್ಲವೆಂದೂ, ವಾಷಿಂಗ್ಟನ್ನಿನಲ್ಲಿ ಕರ್ನಲ್ ನಾಕ್ಸ್‌ರವರು ಹೇಳಿದರು. ಅಲ್ಲದೆ ನಾವು ಸಬ್ ಮೆರೀನನ್ನು ನಾಶ ಮಾಡದೆ ಯುದ್ಧವನ್ನು ಪೂರೈಸುವದಕ್ಕಾಗುವುದಿಲ್ಲವೆಂದು ಹೇಳಿ ನಾವು ವಿಶೇಷವಾಗಿ ನೌಕೆಯನ್ನು ಕಟ್ಟುತ್ತಿರುವೆವೆಂದರು.

ಸಿಂಧ್ ಸರ್ಕಾರದ ಲೇಬರ್ ಕಮಿಷನರಾದ ವಿ || ಎಂ. ಎ. ಸಯ್ಯದ್‌ರವರು ಲಂಚ ತೆಗೆದುಕೊಂಡರೆಂದು ಕೆಲಸದಿಂದ ವಜಾಮಾಡಲ್ಪಟ್ಟರುವರು.

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ.

ಮೇಷ

ಈವಾರ ನಿವಗೆ ತಿಪ್ಪೇಶ್ವರ ವಿರೋಧ. ಸ್ವಜನರೊಡನೆ ವಿರಸ ಸ್ವಾಸ್ಥ್ಯ, ಸ್ತ್ರೀ ಪುತ್ರರಿಗೆ ಅನಾರೋಗ್ಯ ಜಂಬಲತೆ ರುದ್ರಪೂಜೆ ಮಾಡಿಸಿ ಕ್ಷೇಮ. ತಾ॥ 28 29 ದೇವತಾಗ್ರ. ಸೇವಾಫಲ ಸತ್ಕಥಾ ಶ್ರವಣ. ಪುಣ್ಯಕಾರ್ಯಸಿದ್ಧಿ.

ವೃಷಭ

ಸಂಚಾರಾಧಿಕ. ಸರ್ಕಾರಿ ಕಾರ್ಯ ಮುಂದುವರಿಯುವಿಕೆ, ಶತ್ರು ವೃದ್ಧಿ ಶುಭಕಾರ್ಯದಲ್ಲಿ ವಿಘ್ನ, ಬಂಧು ವಿರೋಧ, ಸೂರ್ಯ ನಮಸ್ಕಾರಮಾಡಿ ಎಳ್ಳುದಾನಾ ಕೊಡಿ ಶುಭ. ತಾ | 29 30 ಸುಖಾಧಿಕ ಕಾರ್ಯಾನುಕೂಲ.

ಮಿಥುನ

ಕಾರ್ಯಸಿದ್ಧಿ ಸತ್ಕಥಾ ಶ್ರವಣ ಸ್ತ್ರೀಪುತ್ರಸೌಖ್ಯತೆ, ತಾ || 26 27 ವ್ಯಯಾಧಿಕ ಸ್ತ್ರೀ ವಿರೋಧ ಸೀತಾಲಕ್ಷ್ಮಿ ಶ್ರಯ, ವಿಷ್ಣುಪೂಜೆಮಾಡಿ ಶುಭ.

ಕರ್ಕಾಟಕ

ಸುಖಾಧಿಕ ರಾಜಕೀಯದವರ ಮಿತ್ರತ್ವ ಕಾರ್ಯಲಾಭ ವಾಹನಸೌಖ್ಯ ಶುಭಕಾರ್ಯಾಧಿಕ. ತಾ || 29 30 ಸ್ತ್ರೀಮೂಲಕ ನಿಂದಾವಾರ್ತೆ ಜೋರಭಯ. ಅನಾರೋಗ್ಯ ಗೋಪೂಜೆಮಾಡಿ ಕ್ಷೇಮ.

ಸಿಂಹ

ಬಂಧುಸನ್ಮಾನ ಅಧಿಕಾರವರ್ಗದಿಂದ ಸುಖ ದೇಹಾರೋಗ್ಯ ಶುಭೋದಯ, ತಾ || 29 30 ಸ್ತ್ರೀವಿರೋಧ ನೀಚಾಶ್ರಯ ಲಕ್ಷ್ಮೀಪೂಜೆಗೆ ಸಹಾಯಮಾಡಿ ಶುಭ.

ಕನ್ಯಾ

ಆಪ್ತರಿಗೆ ತೊಂದರೆ ಕಾರ್ಯಭಂಗ ಶತ್ರುಭಯ ಚಂಚಲತೆ, ಆದಿತ್ಯಹೃದಯ ಪಾರಾಯಣ ಮಾಡಿ ಫಲ ಉತ್ತಮ ತಾ || 29 30 ಸುಖಾಧಿಕ ಶತ್ರುಂಜಯ ಕಾರ್ಯದಲ್ಲಿ ಉತ್ಸಾಹ.

ತುಲಾ

ಆದಾಯಕ್ಕಿಂತ ವಿಪರ್ಯ ಹೆಚ್ಚು ಗೃಹಕೃತ್ಯದಲ್ಲಿ ಮನಸ್ತಾಪ ವಿರೋಧ ವಾರ್ತೆ ಬಂಧುವಿಗೆ ತೊಂದರೆ, ಸಹಸ್ರ ನಾಮ ಪಾರಾಯಣ ಮಾಡಿ ಮಂಗಳ, ತಾ|| 25 26 ಕಾರ್ಯಸಿದ್ಧಿ ಧನಾಗಮನ ಮಾತಿನಲ್ಲಿ ಜಯತ್ಕಾರ.

ವೃಶ್ಚಿಕ

ಯುಕ್ತಕಾರ್ಯಸಿದ್ಧಿ ಬಂಧು ದರ್ಶನ ಮನೆಯಲ್ಲಿ ಮಂಗಳಕಾರ್ಯ ಮನೋಲ್ಲಾಸ ಅಧಿಕಾರವರ್ಗದಿಂದ ಅನುಕೂಲ ಲಾಭಕಾರ್ಯ. ತಾ || 30 ಫಲಕಡಮೆ ಲಕ್ಷ್ಮಿ ಪೂಜೆಮಾಡಿಸಿ ಶುಭ.

ಧನು

ಜನರಲ್ಲಿ ಗಣ್ಯತೆ ಮನೆಯಲ್ಲಿ ಮಂಗಳ ಕಾರ್ಯ ಶತ್ರುವಿನ ಆಟ ತಗ್ಗುವುದು. ತಾ || 24 28 ಸ್ವಜನರಲ್ಲಿ ಮನಸ್ತಾಪ ಆಸ್ತರಿಗೆ ತೊಂದರೆ ವ್ಯಯಾಧಿಕ ಸಹಸ್ರನಾಮಾರ್ಚನೆ ಮಾಡಿಸಿ ಶುಭ.

ಮಕರ

ಯೋಗಬಲವಿರತ್ಪೆ, ಕೀರ್ತಿ ಸುಖ. ಕಾರ್ಯದಲ್ಲಿ ದಕ್ಷತೆ ವಾಹನಸೌಖ್ಯ ಗೃಹಾಭಿವೃದ್ಧಿ, ತಾ|| 25 26 ವಿರೋಧ ಫಲ. ಮನಸ್ತಾಪ. ಹುತ್ಯಕ್ಕೆ ಹಾಲು ತುಪ್ಪಾ ಜಡಿ ಮಂಗಳ.

ಕುಂಭ

ದೊಡ್ಡವರ ಆಶ್ರಯ ಯತ್ನಕಾರ್ಯ ಸಿದ್ಧಿ, ಒಂಭು ಮನ್ನಣೆ. ಅಧಿಕಾರವರ್ಗದಿಂದ ಸುಖ, ತಾ || 27 28 ಸ್ತ್ರೀ ವಿರೋಧ ಕಾರ್ಯಭಂಗ ಚಂಚಲತೆ ತೊಗರಿಬೇಳೆ ದಾನ ಕೊಡಿ ಕ್ಷೇಮ.

ಮೀನ

ಕೆಲಸಕಾರ್ಯಾನುಕೂಲತೆ ರಾಜಕೀಯ ಜನರ ವಿಶ್ವಾಸ ಪುಣ್ಯಕಾರ್ಯಾನುಕೂಲ ಕೀರ್ತಿವೃದ್ಧಿ. ಶತ್ರುಂಜಯ, ರಾಜಕೀಯ ಧನ ಪ್ರಾಪ್ತಿ. ತಾ || 29 30 ವಿರೋಧ ಫಲ, ವ್ಯಯಾಧಿಕ. ಚಿಂತೆ ನವಗ್ರಹ ಸೇವೆ ಮಾಡಿ ಶುಭ ಫಲ.

ರಥೋತ್ಸವ

ಟಿ. ನರಸೀಪುರತಾಲ್ಲೂಕ ಕೃಷ್ಣಾಪುರದ ಶ್ರೀ ಸನ್ಮಾನ ಗೋಪಾಲಕೃಷ್ಣಸ್ವಾಮಿಯವರಿಗೆ ತಾ || 27-4-43 ಆಗಾಯ್ತು ಬ್ರಹ್ಮೋತ್ಸವವು ಮಾಮೂಲು ವೈರೆ ಪ್ರಾರಂಭವಾಗಿ ತಾ || 4-5-43 ನೇ ವಂಗಳವಾರ ಅಭಿಜನ್ಮುಹೂರ್ತದಲ್ಲಿ ರಥೋತ್ಸವವು ನಡೆಯುತ್ತೆ.

ಂ ಂ

ಬಿಕ್ಷ ಬೇಡುವ ನಾಯಿ

ಲಂಡನ್ನಿನ ಈಸ್ಟ್ ಎಂಡ್ ಸ್ಟೇಷನ್ನಿನಲ್ಲಿ ರೈಲು ಬಂದಾಗ, ಒಂದು ಹಿತ್ತಾಳೆ ಪೆಟ್ಟಿಗೆಯನ್ನು ಬೆನ್ನಿಗೆ ತಗಲಿಸಿಕೊಂಡು ಒಂದು ನಾಯಿಯು ಪ್ರತಿ ಕಂಪಾರ್ಟುಮೆಂಟಿಗೂ ಹೋಗಿ ಬಿಕ್ಷವನ್ನು ಬೇಡಿಕೊಂಡು ಬರುತ್ತದೆ. ಸುಮಾರು 25 ವರ್ಷಗಳಿಂದ ಇಂಥಾ ನಾಯಿಗಳು ಈ ಸ್ಟೇಷನ್ನಿಗೆ ಬರುತ್ತವೆ.

ಡಿಫೆನ್ಸ್ ಶಾಸನ 26 ನೇ ವಿಧಿಯು ಶಾಸನಾತೀತ

ಫಿಡರಲ್ ಕೋರ್ಟಿನ ತೀರ್ಪು

ಕೇಂದ್ರ ಸರಕಾರಕ್ಕೆ ಶಾಸನಸಭೆಯು ಸಹಿಸಿಕೊಡುವ ಅಧಿಕಾರಗಳನ್ನೂ ಸಹ ಡಿಫೆನ್ಸ್ ಶಾಸನದ 26 ನೇ ವಿಧಿಯಿಂದ ಲಭಿಸುವ ಆಧಿಕಾರವು ಅತಿಯಾಗಿರಲು ಈ 26 ನೇ ವಿಧಿಯು ಶಾಸನಾತೀತವಾಗಿದೆ ಎಂದು ಫೆಡರಲ್ ಕೋರ್ಟು ತೀರ್ಪಿತ್ತಿದೆ. ಚೀಫ್ ಜಸ್ಟಿಸ್ ಸರ್ ಮಾರಿಸ್ ಗ್ವಯ್ಡನರು ಈ ರೀತಿ ಅಭಿಪ್ರಾಯಪಟ್ಟಿರುತ್ತಾರೆ — " ನಮ್ಮ ಈ ತೀರ್ಮಾನದಿಂದ ಸರಕಾರಕ್ಕೆ ಕೋಪ ತೊಂದರೆಯೂ, ಕೊಂಚ ತೊಡಕೂ ತಾತ್ಕಾಲಿಕವಾಗಿಉಂಟಾಗಬಹುದೆಂಬುದನ್ನು ನಾವು ಅರಿತಿದ್ದೇವೆ. ಅದರಲ್ಲೂ ಈಗ ಈ ರೀತಿ ತೊಂದರೆಯಾಗುವುದನ್ನು ನಾವು ವಿಷಾದಿಸುತ್ತೇವೆ. — ಭಾರತ ಪ್ರಜೆಗಳನೇಕರ ಸ್ವಾತಂತ್ರ್ಯಕ್ಕೆ ಚ್ಯುತಿ ತಂದಿರುವ ಇಂಥ ಅಧಿಕಾರಗಳನ್ನು ಪಡೆಯುವಾಗ ಸರ್ಕಾರದವರು ವಿಶೇಷ ಎಚ್ಚರಿಕೆ ತೆಗೆದುಕೊಳ್ಳಲೆಂದು ನಮ್ಮ ಆಶಯ. ಇಂಥ ಅಧಿಕಾರಗಳನ್ನು ಕರಾರುವಾಕ್ಕಾಗಿ ಸ್ಪಷ್ಟಪಡಿಸಿಕೊಂಡರೆ ಬಂಧನದಲ್ಲಿಡುವ ಅಪಾಯವು ಜನರಿಗೆ ಅವಶ್ಯ ತಪ್ಪಿಹೋಗಬೇಕು. ಅಲ್ಲದೆ ಹೀಗೆ ಅಜ್ಞೆಮಾಡುವ ಅಧಿಕಾರವಿರುವಾಗ ಜನರನ್ನು ವಾರಂಟಿಲ್ಲದೆ ದಸ್ತಗಿರಿ ಬಂಧನದಲ್ಲಿಡಲು ಸಕಾರಣಗಳನ್ನು ಅಜ್ಞೆಯಲ್ಲಿ ನಮೂದಿಸಬೇಕಾದದ್ದು ಅವರ ಕರ್ತವ್ಯವೂ ಎಂದು ನಾವು ಸ್ಪಷ್ಟಪಡಿಸಲು ಇಚ್ಛಿಸುತ್ತೇವೆ."

ಬಟ್ಟೆಯ ಬರ

ಅಕ್ಕಿಯ ಬೆಲೆಯಂತೆ ಬಟ್ಟೆಯ ಬರವೂ ಈಚೆಗೆ ಹೆಚ್ಚಿದೆ. ಹೆಚ್ಚಾದದು ಮಾತ್ರವಲ್ಲ, ಭಯಂಕರ ರೂಪವನ್ನು ತಾಳುತ್ತಿರುವಂತಿದೆ. ಬೆಲೆಯು 4-5 ರಷ್ಟು ಹೆಚ್ಚಿದೆ. ಬಡವರ ಕಷ್ಟವು ಹೇಳತೀರದಾಗಿದೆ. ಬಟ್ಟೆಗಳನ್ನು ಶೇಖರಿಸಿಟ್ಟುಕೊಳ್ಳಕೂಡದು, ಎಲ್ಲರೂ ಮಿತವಾಗಿ ಉಡುಪನ್ನು ಉಪಯೋಗಿಸಲು ಆರಂಭಿಸಬೇಕು. ಆಗ ಈ ಕಷ್ಟವು ನಿವಾರಣೆಯಾಗಬಹುದು.

ಈ ದೇಶದ ಗಲಾಟೆಗೆ ಕಾಂಗ್ರೆಸ್ಸೇ ಕಾರಣವೆಂಬ ಹೆಸರಿನಲ್ಲಿ ಸರ್ ರಿಚರ್ಡ್ ಟಾಟ್ ಹಾಂರವರು ಪ್ರಕಟಿಸಿರುವ ಪುಸ್ತಕಗಳು ಇದುವರೆಗೂ 7 ಸಾವಿರ ಪ್ರತಿಯವಾಗಿದೆಯೆಂದು ತಿಳಿದುಬಂದಿದೆ.

ಪರೀಕ್ಷೆಗಳನ್ನು ತಗ್ಗಿಸಬೇಕು.

ಕಾಗದದ ಖರ್ಚನ್ನು ತಗ್ಗಿಸಲು ಸಾಧ್ಯವಾಗುವವರೆಗೂ ಪರೀಕ್ಷೆಗಳನ್ನು ತಗ್ಗಿಸಬೇಕೆಂದೂ, ಯುದ್ಧ ಸಮಯದಲ್ಲಿ ಪಠ್ಯ ಪುಸ್ತಕಗಳನ್ನು ಬದಲಾಯಿಸಕೂಡದೆಂದೂ, ಉತ್ತೀರ್ಣರಾದ ವಿದ್ಯಾರ್ಥಿಗಳ ಪುಸ್ತಕಗಳನ್ನು ಕೊಂಡು ಹೊಸ ವಿದ್ಯಾರ್ಥಿಗಳಿಗೆ ಕೊಡಬೇಕೆಂದೂ, ಅನೇಕ ಪಠ್ಯ ಗ್ರಂಥಗಳನ್ನು ಅಚ್ಚುಹಾಕಿಸುವ ಅವಶ್ಯಕತೆಯಿಲ್ಲವೆಂತೆ ಟೆಕ್ಸ್ಟ್‌ಬುಕ್ ಕಮಿಟಿಯು ವರು ತಾವು ಸಿಫಾರಸುಮಾಡುವ ಗ್ರಂಥಗಳ ಸಂಖ್ಯೆಯನ್ನು ತಗ್ಗಿಸಬೇಕೆಂದು ಸೆಂಟ್ರಲ್ ಬೋರ್ಡ್ ಆಫ್ ಎಜುಕೇಷನ್‌ನವರು ರಾಷ್ಟ್ರೀಯ ಸರ್ಕಾರಗಳಿಗೂ ವಿಶ್ವವಿದ್ಯಾನಿಲಯವೇ ಮೊದಲಾದುವುಗಳಿಗೂ ಸಲಹೆಕೊಟ್ಟಿರುವರೆಂದು ತಿಳಿಯಬಂದಿದೆ.

ಂ ಂ

ಭಾರತೀಯರ ವಿರುದ್ಧ ಶಾಸನ

ನೇಟಾಲ್ ಮತ್ತು ಟ್ರಾನ್ಸ್‌ವಾಲುಗಳಲ್ಲಿ ಭಾರತೀಯರು ಜವಿಾನು ಕೊಳ್ಳುವುದನ್ನು ನಿಷೇಧಿಸುವ ಮಸೂದೆಯು ಈ ಸೆಷನ್ನಿನಲ್ಲಿ ಅಲ್ಲಿನ ಶಾಸನ ಸಭೆಯಲ್ಲಿ ಅಂಗೀಕೃತವಾಯಿತು. ಪಾರ್ಲಿಮೆಂಟಿನಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿ ಮಿ|| ಎಮರಿಯವರು ಈ ಮಸೂದೆಯ ವಿಷಯದಲ್ಲಿ ಯಾವ ಹೇಳಿಕೆಯನ್ನೂ ಕೊಡುವದಿಲ್ಲ, ಇದು ಆಫ್ರಿಕಾಕ್ಕೂ ಇಂಡಿಯಾಕ್ಕೂ ಸಂಬಂಧಪಟ್ಟದ್ದು ಎಂದರು

ಂ ಂ

ಶಾಸನ ಸಭಾಧ್ಯಕ್ಷರಿಗೆ ಜುಲ್ಮಾನೆ

16 ವರ್ಷದ ತಮ್ಮ ಮಗಳನ್ನು ಹದಿನಾರುವರೆ ವರ್ಷದ ವರನಿಗೆ ಕೊಟ್ಟು ಮದುವೆ ಮಾಡಿದರೆಂದು ಮಧ್ಯ ಪ್ರಾಂತ್ಯದ ಶಾಸನ ಸಭಾಧ್ಯಕ್ಷರಿಗೆ 500 ರೂಪಾಯಿ ಜುಲ್ಮಾನೆಯಾಯಿತು.

ರಷ್ಯಾದಲ್ಲಿ ಜರ್ಮನರು ವಿಷ ವಾಯು ಪ್ರಯೋಗಮಾಡಲು ಸಿದ್ಧತೆ | ಮಾಡುತ್ತಿದ್ದಾರೆಂದೂ ಜಿನೀವ ಕರ್ವೆನ್ಷನ್ ಪ್ರಕಾರ ಹಾಗೆ ಉಪಯೋಗಿಸಿದಲ್ಲಿ ತಾವು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುತ್ತೇವೆಂದು ಮಿ|| ಚರ್ಚಿಲ್ಲರು ಹೇಳಿದ್ದರು ಇದಕ್ಕೆ ಜರ್ಮನಿಯು ತನ್ನ ರೇಡಿಯೋದಲ್ಲಿ 28 ನೇ ತಾರೀಖಿಂದ ತಾನೆಂದಿಗೂ ವಿಷವಾಯು ಪ್ರಯೋಗಮಾಡಿಲ್ಲ ಇತರರು ಉಪಯೋಗಿಸಿದರೆ ತಾನೂ ಉಪಯೋಗಿಸುವುದೆಂದು ಹೇಳಿತು.

ಹಬ್ಬ

ಶ್ರೀಮತಿ ಟಿ. ಆರ್. ಗೋಪಿಬಾಯಿ

ಹಬ್ಬಗಳನ್ನು ಮಾಡಿ ಊಟಕ್ಕೆ ಕರೆಯುವ ಪದ್ಧತಿಯು ನಾಗರೀಕರಲ್ಲಾಗಲಿ ಅನಾಗರೀಕರಲ್ಲಾಗಲೀ ಪೂರ್ವದಿಂದಲೂ ರೂಢಿಯಲ್ಲಿದೆ. ಇದರ ಉದ್ದೇಶ ತಮ್ಮ ಬಂಧುಬಳಗವನ್ನೆಲ್ಲಾ ಒಟ್ಟುಗೂಡಿಸುವುದು ಪರಸ್ಪರ ಸಹೋದರ ಭಾವವನ್ನು ವ್ಯಕ್ತಪಡಿಸುವುದಾಗಿರುವುದಲ್ಲವೆ ? ಈ ಊಟದ ಸಮಾರಂಭದಲ್ಲಿ ಎಲ್ಲರೂ ಒಂದೇ ಎಂದು ಭಾವಿಸುವರು, ಇಲ್ಲಿ ಯಾರು ಯಾರನ್ನೂ ದೂರುವುದಿಲ್ಲ. ಒಬ್ಬರು ಕಟ್ಟಿದ್ದನ್ನು ಮಾಡಿರುವುದನ್ನು ಜ್ಞಾಪಿಸಿಕೊಳ್ಳುವುದಿಲ್ಲ. ಶತ್ರುತ್ವವನ್ನು ಮರೆಯುವರು.

ನಮ್ಮಂತೆಯೇ ರೋಮ್, ಗ್ರೀಸ್, ಈಜಿಪ್ಟಿನವರು ಹಬ್ಬಗಳನ್ನಾಚರಿಸಿ ತಮ್ಮ ನೆಂಟರಿಷ್ಟರನ್ನು ಕರೆಯುತ್ತಿದ್ದರು. ಕ್ರಿಶ್ಚಿಯನ್ನರಲ್ಲಿ ಒಬ್ಬರಿಗೊಬ್ಬರಿಗೆ ಎಷ್ಟೇ ಮನಸ್ತಾಪವಿದ್ದರೂ ಫಸ್ಟ್ ಹಬ್ಬದ ಕಾಲದಲ್ಲಿ ಗುಡ್ ಫ್ರೈಡೆ ದಿನದ ಮಾತನಾಡಿಸುವರು. ಪೂರ್ವದಲ್ಲಿ ರೋಮ್ ಜನರಲ್ಲಿ ಈಗಿನಹಾಗೆ ತಟ್ಟೆಗಳೂ ಬಟ್ಟಲುಗಳೂ ಇರಲಿಲ್ಲ. ಈಗ ದನಕ್ಕೆ ಕುಡಿಸುವ ಗೊಟ್ಟದಂತೆ ಬೆಳ್ಳಿಯಲ್ಲಾಗಲೀ ಶೃಂಗಾರದಲ್ಲಾಗಲೀ ತಯಾರು ಮಾಡಿ ಊಟಕ್ಕೆ ಉಪಯೋಗಿಸುತ್ತಿದ್ದರು. ಗ್ರೀಕರೂ, ರೋಮನರೂ ಊಟ ಕಾಲದಲ್ಲಿ ಏನಾದರೂ ಓದುತ್ತಿದ್ದರು. ಮುಖ್ಯವಾಗಿ ಮನೆಯ ಯಜಮಾನನೇ ಈ ವಾಡಿಕೆಯನ್ನು ಇಟ್ಟುಕೊಂಡಿದ್ದನು.

ನಾವು ಚರಿತ್ರೆಯಲ್ಲಿ ಅನೇಕ ಚಕ್ರವರ್ತಿಗಳು ತಾವೇ ಮನೆಯವರು ಊಟ ಮಾಡುತ್ತಿದ್ದಾಗ ಓದುತ್ತಿದ್ದುದನ್ನು ಕೇಳಿದ್ದೇವೆ. ಈಗಿನ ಹಾಗೆ ಊಟಕ್ಕೆ ಬಂದವರು ಇಸ್ಪೀಟು ಆಟವನ್ನಾಡುತ್ತಿರಲಿಲ್ಲ. ಗ್ರೀಕರು ಊಟಮಾಡುತ್ತಿದ್ದಾಗ ಒಬ್ಬರಿಗೊಬ್ಬರು ಪ್ರೀತಿಕರವಾದ ಚರ್ಚೆಗಳನ್ನು ನಡೆಸುತ್ತಿದ್ದರು. ಇಂತಹ ಚರ್ಚೆಗಳನ್ನು ಪ್ಲೂವಾರ್ಕ್ ಒಂದು ಪುಸ್ತಕರೂಪದಲ್ಲಿ ಸ್ಪಷ್ಟಪಡಿಸಿರುವನು ಸಿಥಿಯನ್ನರು ಬಿಲ್ಡಿನ ಶಬ್ದ ಮಾಡುತ್ತಿದ್ದರು. ಮೋಡಿಯವರ ಅಧಿಕಾರಿಗಳು ಊಟಕ್ಕೆ ಕೂತಾಗ ಸರ್ಕಾರಿ ಕೆಲಸಗಳ ವಿಷಯ ಮಾತಾಡುತ್ತಿದ್ದರು ಸೀಜರ್ ತಾನು ಗೆದ್ದುಬಂದಾಗ 2200 ಜನರನ್ನು ಒಂದೇ ಕಡೆಯಲ್ಲಿ ಕೂರಿಸಿ ಭೋಜನ ಮಾಡಿಸಿದನು. ನೀರೋ ಆಯಾ ಋತು ಕಾಲದ ವ್ಯಂಜನಗಳನ್ನು ಮಾಡಿಸುತ್ತಿದ್ದನು. ರೋಮನರು ಊಟವನ್ನು ಎಂಡು ಬಗೆಯಾಗಿ ಮಾಡಿಸುತ್ತಿದ್ದರು. 'ಮೊದಲು ಮಾಂಸದ ಊಟ, ಇದಾದ ಮೇಲೆ ಬರೇ ಹಣ್ಣನ್ನು ಸೇವಿಸುವುದು. ಯಾವ ಜನಾಂಗದವರಾದರೂ ಹಬ್ಬಗಳನ್ನು ಮಾಡುವುದು ನಂಟರಿಷ್ಟರೊಡನೆ ಸಂತೋಷದಿಂದ ಕಾಲ ಕಳೆಯುವದಕ್ಕಲ್ಲವೇ ?

— ? —

ಅಕ್ಕಿ, ಅಕ್ಕಿ, ಅಕ್ಕಿ !

ಮುಂಬಯಿನಲ್ಲಿ ಅಕ್ಕಿ ದರ ಒಂದು ರೂಪಾಯಿಗೆ ಒಂದು ಸೇರು.

ಮಿರಾಜ್‌ನಲ್ಲಿ ಒಂಡೂಕಾಲು ಸೇರು.

ಸಿಲೋನಿನಲ್ಲಿ ಮೂಟೆ ಒಂದಕ್ಕೆ 250 ರೂಪಾಯಿ.

ಹೀಗಿರುವಾಗ ಮೈಸೂರಿನವರು ಪುಣ್ಯವಂತರಲ್ಲವೆ ?

ಇನ್ನೆಲ್ಲವೂ ಮಿತ್ರ ಪಕ್ಷದ ಜಯಸೂಚನೆಗಳಲ್ಲವೇ ?

1 ಟ್ಯುನಿಸಿಯಾದಿಂದ ರೋಮೆಲ್ಲರ ಪರಾರಿ.

2 ಟ್ಯುನಿಸಿಯಾದಲ್ಲಿ 8ನೆಯ ಬ್ರಿಟಿಷ್ ದಳದ ಅಘಾತದ ವಿಜಯ.

3 ಬಾಲ್ಕನ್ ಪ್ರಾಂತ್ಯಗಳ ಜನಗಳಲ್ಲಿ ಅಶಾಂತಿ.

4 ರೋಂ, ಬರ್ಲಿನ್ ನಗರಗಳ ಮೇಲೆ ಬಾಂಬುಗಳ ಸುರಿಮಳೆಯಿಂದ ಅಪಾರ ನಷ್ಟ.

5 ಹಂಗೇರಿ, ಇಟಲಿ ಸೇನೆಗಳು ರಷ್ಯಾದಿಂದ ಹಿಂದಿರುಗಿರುವಿಕೆ.

6 ಫಿನ್ಲೆಂಡು ರಷ್ಯದೊಂದಿಗೆ ಪ್ರತ್ಯೇಕ ಕರಾರು ಮಾಡಿಕೊಳ್ಳಲು ಹಾತೊರೆಯುವಿಕೆ.

7 ರಷ್ಯಾದಲ್ಲಿ ರಷ್ಯನರ ಮುಂದೋಟ ಮತ್ತು ಅಸಂಖ್ಯಾತ ಜರ್ಮನರ ನಾಶ

8 ಒರ್ಮಾದ ಮೇಲೆ ವೈಮಾನಿಕರ ಪ್ರಚಂಡ ಧಾಳಿ.

9 ಚೈನಾದಲ್ಲಿ ಚೈನೀಯರ ಸ್ಥಾನಿಕ ವಿಜಯಗಳು.

10 ಚೈನಾದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಜಪಾನು ಅಶಿಸುತ್ತಿರುವಿಕೆ.

11 ಬ್ರಿಟನ್, ರಷ್ಯಾ ಮತ್ತು ಚೈನಾಗಳಿಗೆ ಅಮೆರಿಕಾದ ಅಪಾರ ಸಹಾಯ ಇತ್ಯಾದಿ

ಹಿಟ್ಲರ್ ವರ್ಧಂತಿ ಕಾಲದಲ್ಲಿ ಮಿತ್ರ ಮಂಡಲಿಯವರ ಬಾಂಬು ಸುರಿಮಳೆ

ಹಿಟ್ಲರ್ ವರ್ಧಂತಿ ಉತ್ಸವವು ಮೊನ್ನೆ ಮಂಗಳವಾರ ಜರ್ಮನಿಯಲ್ಲಿ ನಡೆಯುತ್ತಿದ್ದಾಗ ಬ್ರಿಟಿಷ್ ಮತ್ತು ಅಮೆರಿಕ ವಿಮಾನಗಳು ಬರ್ಲಿನಲ್ಲಿ ಬಾಂಬುಗಳ ಸುರಿಮಳೆ ಸುರಿಸಿ ಹಿಟ್ಲರ್ ವಾಸಸ್ಥಳವಾದ ಫ್ರಾಸೆಲರಿ ವೇಲೆ ಸುರಿಮಳೆ ಮಾಡಿದರು. ಪುಷ್ಪವೃಷ್ಟಿಯಲ್ಲ. ಬಾಂಬುಗಳು.

ಈಗ ಕೆಲವು ತಿಂಗಳ ಕೆಳಗೆ ಅಮೆರಿಕಾ ವೈಮಾನಿಕರಲ್ಲಿ ಕೆಲವರು ಜಪಾನರ ಕೈಗೆ ಸಿಕ್ಕಿಬಿದ್ದರು. ಅವರಲ್ಲಿ ಕೆಲವರನ್ನು ಜಪಾನೀಯರು ಕೊಂದರು. ಇನ್ನು ಕೆಲವರನ್ನು ಜೈಲುಮಾಡಿದರು. ಈ ವಿಷಯವು ಜಪಾನ್ ರೇಡಿಯೊದಲ್ಲಿ ಹೇಳಿದಾಗ್ಯೂ ವಿ|| ರೂಸ್‌ವೆಲ್ಟರು ಮಾರ್ಚ್ ೧೫ ರ ವರೆಗೆ ಇವರ ರಹಸ್ಯವೇನೆಂದೂ ತಿಳಿಯುತ್ತಿದ್ದರು. ಈಗ ಜಪಾನೀಯರು ಈ ನೀಚ ಕೃತ್ಯವನ್ನು ಮಾಡಿದ್ದಕ್ಕೆ ಖಂಡನೆಯನ್ನು ಜಪಾನ್ ಸರ್ಕಾರಕ್ಕೆ ತಿಳಿಸಿರುತ್ತಾರೆ.

ರಷ್ಯಾ ರಣರಂಗದ ಕ್ಯೂಬಾನ್‌ನಲ್ಲಿ ಜರ್ಮನಿಯರು ವಿಷವಾಯುವನ್ನು ಉಪಯೋಗಿಸುತ್ತಿದ್ದರೆಂದೂ ಹೀಗೆ ಮಾಡುವುದಾದರೆ ಪ್ರತೀಕಾರ ಮಾಡುವುದಾಗಿ ವಿ|| ಚರ್ಚಿಲರು ಒಂದು ಪ್ರಕಟಣೆ ಹೊರಡಿಸಿರುವರು.

ಗಾಂಧೀಜಿಯವರ ತತ್ವವು ಬಾಲ್ಕನ್‌ದೇಶದಲ್ಲಿ ಎಷ್ಟು ಪ್ರಖ್ಯಾತಿಯಾಗಿದೆಂದು ಲಂಡನ್‌ಗೆ ಒಬ್ಬ ಯುಗೋಸ್ಲೋವಿಯಾ ನಿವಾಸಿಯು ಹೇಳಿರುವನು ರಾಡೀಚ್ ಕೋಟ್ ಸೈತರ ಪಾರ್ಟಿಯಮುಖಂಡನನ್ನು ಜರ್ಮನಿಯರ ಕೊಂದರಷ್ಟೆ. ಇವನು ಗಾಂಧೀಜಿಯ ತತ್ವವನ್ನು ಅನುಸರಿಸುತ್ತಿದ್ದರು. ಇವನು ಫ್ರೆಂಚ್ ದೇಶದವನು ಗ್ರಂಥಗಳಲ್ಲಿ ಗಾಂಧಿತತ್ವನನ್ನು ಉಪಯೋಗಿಸುತ್ತಿದ್ದನು.

ರಷ್ಯನರು ಜರ್ಮನಿಯ ಟುಲ್‌ಸಿಟ್ ನಗರದ ಮೇಲೆ ಬಲವಾದ ಧಾಳಿಮಾಡಿದರು.

ಕ್ಯೂಬನ್‌ನಲ್ಲಿ ಜರ್ಮನಿಯರು ಸುಮಾರು ಒಂದು ಲಕ್ಷ ಸೈನ್ಯವನ್ನು ತಂದಿರುವರು.

ರಾಯಲ್ ಕೆನೆಡಿಯನ್ ವಿಮಾನ ದಳದವರ ಖರ್ಚನ್ನೆಲ್ಲಾ ಕೆನಡಾ ಸರಕಾರದವರೇ ಕೊಡುತ್ತಾರೆ.

ಆಫ್ರಿಕಾದಲ್ಲಿ ತಂದಿರುವ ಭಾರತ ಏರುದ್ದ ಮುಸೊಲಿನಿಯ ಕೇಪ್‌ಟೌನ್ ಪಾರ್ಲಿಮೆಂಟಿನಲ್ಲಿ 3 ನೆ ವೃತ್ತಿ ಪ್ರಯತ್ನವಾಯಿತು. ಇನ್ನು ನ್ಯಾಯದ ಕಡತಕ್ಕೆ ಸೇರಬೇಕು.

ಇದುವರೆಗೆ ಇಂಗ್ಲೆಂಡಿನಲ್ಲಿ ಚರ್ಚಿನಲ್ಲಿ ಗಂಟೆ ಹೊಡೆಯುವುದನ್ನು ನಿಲ್ಲಿಸಿದ್ದರು. ಈಗ ಈ ಆಜ್ಞೆಯನ್ನು ವಜಾಮಾಡಿರುವರು.

ದೆಹಲಿಯಲ್ಲಿರುವ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಸಾನಕ್ಕೆ ವಿ|| ಫಿಲಿಪ್ಸರು ದಯಮಾಡಿ ದೇವರ ದರ್ಶನಮಾಡಿದರು. ತೀರ್ಥ ಪ್ರಸಾದ ಸ್ವೀಕರಿಸಿದರು.

ಶಂಕರನ್ ಕೊಯಿಲ್‌ನಲ್ಲಿ ಕಾಂಗ್ರೆಸ್ ಬಾವಟವನ್ನು ರಥಕ್ಕೆ ಏರಿಸಿದ ಹೊರ್ತು ರಥವನ್ನು ಎಳೆಯುವುದಿಲ್ಲವೆಂದು ಅಲ್ಲಿನವರು ಪ್ರತಿವರ್ಷವೂ ನಡೆಸತ್ತಿದ್ದ ರಥೋತ್ಸವವನ್ನು ನಿಲ್ಲಿಸಿಬಿಟ್ಟರು.

ಈಚೆಗೆ ಹುಣಿಸೆ ಬಿತ್ತಕ್ಕೂ ಗಿರಾಕಿ ಹೆಚ್ಚುತ್ತಿದೆ. ಕಾರಣವೇನೆಂದರೆ ಇದು ರೆಬ್ಬರಿನ ತಯಾರಿಕೆಯಲ್ಲಿ ಬಹಳ ಉಪಯೋಗಪಡುತ್ತದೆ.

ವಿವಿಧ ವರ್ತಮಾನ

ಲಕ್ನೋದಲ್ಲಿ ರೇಷನಿಂಗ್ ವಜಾ ಮಾಡಲಾಗಿದೆ.

ಂ ಂ

ರಷ್ಯಾ ರೆಡ್‌ಕ್ರಾಸ್ ಸಹಾಯ ನಿಧಿಯು ಮೊಟಿಂಗಿದಲ್ಲಿ, ಲಾರ್ಡ್ ಸ್ಯಾಜೆಂಟರವರು, ಟ್ಯುನಿಷಿಯಾನನ್ನು ಪೂರ್ತಿ ವಶ ಮಾಡಿಕೊಂಡು, ಅನಂತರ ಯೂರೋಪಿನಲ್ಲಿ 2 ನೇ ರಂಗವನ್ನು ತೆಗೆಯುವುದನ್ನು ಬಿಟ್ಟು ಈಗಲೇ 2 ನೇ ರಂಗವನ್ನು ಸೃಷ್ಟಿಸುವುದು ಒಳ್ಳೆಯದೆಂದರು.

ಂ ಂ

ಅಮೇರಿಕಾದ ಮಿ॥ ವೆಂಡಲ್ ವಿಲ್ಕಿ ಯವರು ರಚಿಸಿದ "ಏಕವಿಶ್ವ" ಎಂಬ ಪುಸ್ತಕದ 3 ಲಕ್ಷ ಪ್ರತಿಗಳು ಒಂದು ವಾರದಲ್ಲಿ ಖರ್ಚಾದವು. ಈಗ ಪುನಃ ಮುದ್ರಣವಾಗುತ್ತಿದೆ. ಪ್ರಪಂಚದ ಇತಿಹಾಸದಲ್ಲಿ ಇದರಷ್ಟು ಹೆಚ್ಚು ಖರ್ಚಾಗುವ ಪುಸ್ತಕವೇ ಇಲ್ಲವೆಂದು ಹೇಳಲಾಗಿದೆ.

ಂ ಂ

ಕೆನಡಾ ಪ್ರಧಾನ ಮಂತ್ರಿ ಮಿ॥ ಮೆಕನ್ಸಿ ಕಿಂಗ್ ರವರು, ಈಗ 7 ಲಕ್ಷಕ್ಕೆ ಮೇಲೆ ಕೆನಡಿಯ ಯೋಧರು ರಣರಂಗದಲ್ಲಿರುವರು. ಅಲ್ಲದೆ 2 ಲಕ್ಷ ನೌಕಾಸೈನಿಕರು ಈಗಾಗಲೇ ಪ್ರಪಂಚದ ನಾನಾ ಭಾಗಗಳಲ್ಲಿ ಹಾರಾಡುತ್ತಿರುವರು ಎ; ಸ್ತ್ರೀದಳವು 23000 ಕ್ಕೆ ವಿಸ್ತರಿಸಿದೆ' ಎಂದು ಪಾರ್ಲಿಮೆಂಟಿನಲ್ಲಿ ಹೇಳಿದರು.

ಂ ಂ

ಶರ್ಮದೇವಿಯಲ್ಲಿನ ಸುಬ್ಬ ಶೆಟ್ಟಿ ಎಂಬ ವ್ಯಾಪಾರಿಯು ತನ್ನಲ್ಲಿ ವರಾಟಕ್ಕಿದ್ದ ಗೋಧಿಯನ್ನು ಮಾರಲು ಹಿಂತೆಗೆದುದಕ್ಕಾಗಿ ರೂ. 160 ಜುಲ್ಮಾನೆ ವಿಧಿಸಲಾಗಿದೆ.

ಂ ಂ

ವೆಟಿಕಾನ್ ಮತ್ತು ಸ್ಪೇನಿಗೆ ಹೊಸ ಜರ್ಮನ್ ರಾಯಭಾರಿಗಳು ನಿಯಮಿಸಲ್ಪಟ್ಟಿದ್ದಾರೆ.

ಂ ಂ

ಆಹಾರಾಭಾವವು ಕಡಮೆಯಾಗಲು ಹುಲ್ಲು ಮತ್ತು ಹಸಿರು ಎಲೆಗಳನ್ನು ಮಾನವ ಆಹಾರಕ್ಕಾಗಿ ಉಪಯೋಗಿಸುವ ಮಾರ್ಗವನ್ನು ಕಂಡುಹಿಡಿಯಬೇಕೆಂಬ ಸಲಹೆಯನ್ನು ಕಲ್ಕತ್ತಾ ವಿಶ್ವವಿದ್ಯಾನಿಲಯದ ರಸಾಯನ ಶಾಸ್ತ್ರದ ಪ್ರೊಫೆಸರಾದ ಡಾ| ಗುಹಾರವರು ಕೊಟ್ಟಿದಾರೆ.

ಜರ್ಮನಿ ಂಯಭಾರಿಯಾದ ಬ್ಯಾರನ್ ವಾನ್ ಪೇಪನ್ ತುರ್ಕಿಯಿಂದ ವಿಮಾನದಲ್ಲಿ ಬರ್ಲಿನ್‌ಗೆ ಹೋದರು ಈ ತಿಂಗಳ ಕೊನೆಯಲ್ಲಿ ವಾಪಸ್ ಬರುತ್ತಾರೆ.

ಂ ಂ

ಪೂರ್ವ ರಣರಂಗದ ಕಮಾಂಡರ್ ಚೀಫರಾದ ಜನರಲ್ ಸರ್ ಮೋಟಲಾಗ್ ವಿಲ್ಸನ್‌ರವರು ಪತ್ರಪತ್ರಿಕೆಯವರ ಸಂಗಡ ಅಂಕಾರದಲ್ಲಿ ಈ ರೀತಿ ಹೇಳಿದರು. ಕ್ಯಾಸಬ್ಲಾಂಕ ಚರ್ಚೆ ನಡೆದ ನಂತರ ನಿಮ್ಮ ಚರ್ಚಿಲ್ಲರು ಕೆಸರಾದ ಪ್ರವಾಸ ನಡೆದ ಈ ಎರಡು ತಿಂಗಳಲ್ಲಿ ಪ್ರಪಂಚದ ಒದಲಾವಣೆಯಾಗಿದೆ. ಇದರಿಂದ ನಾವು ತರ್ಕಿಗೆ ಯುದ್ಧೋಪಕರಣಗಳನ್ನು ಕಳಿಸಿರುತ್ತೇವೆ. ಅವರು ತಮ್ಮ ರಾಜ್ಯವನ್ನು ಒಲ್ಲದಿದ್ದರೂ ಸಹಾಯ ಮಾಡುವುದೇ ನಮ್ಮ ಈ ಪ್ರವಾಸದ ಕಲಸವೆಂದರು.

ಂ ಂ

ಬೊಂಬಾಯಿನಲ್ಲಿ ಯುದ್ಧದ ಏರಪ್ಲೇನು, ಟ್ಯಾಂಕ್ ಮೊದಲಾಗಿ ಯುದ್ಧದಲ್ಲಿ ಉಪಯೋಗಿಸುವದನ್ನೆಲ್ಲಾ, ಮತ್ತು ಜಪಾನೀಯರಿರದ ಪದೆಬಿಡಿದು ತಂದ ವಿಮಾನ, ರೋಮೆಲ್ಲಿನಿಂದ ಕಿತ್ತುತಂದ ಟ್ಯಾಂಕು ಇವನ್ನೆಲ್ಲಾ ಪ್ರದರ್ಶಿಸಿರುತ್ತಾರೆ. ಇದು 15 ದಿವಸ ನಡೆಯುತ್ತೆ. ಯಾರಿಂದಲೂ ಪ್ರವೇಶಧನವನ್ನು ವಸೂಲು ಮಾಡುವುದಿಲ್ಲ.

ಂ ಂ

ಬೆಲೂಚಿಸ್ತಾನದ ಗಂಧಕದ ಅದುರುಗಳು ಭಾರತದ ಸಕ್ಕರೆ ಕಾರ್ಖಾನೆಗಳಿಗೆ ಉಪಯೋಗಿಸಲ್ಪಡುವುದು.

ಂ ಂ

ಜಪಾನ್ ಮಂತ್ರಿ ಮಂಡಲದಲ್ಲಿ ಬದಲಾವಣೆ ಮಾಡಿರುತ್ತಾರೆ.

ಂ ಂ

ಯೂನಾನ್ ಪ್ರಾಂತದಲ್ಲಿ ಜಪಾನರ ಮುಂಪೆ ನುಗ್ಗುವಿಕೆಯು ನಿಂತಿತು

ಂ ಂ

ಕರ್ನೂಲಿನ 10 ಬೀಡಿ ಕಾರ್ಖಾನೆಗಳು ಮುಚ್ಚಲ್ಪಟ್ಟಿದುದರಿಂದ 4 ಸಾವಿರ ಕೆಲಸಗಾರಂತು ನಿರುದ್ಯೋಗಿಗಳಾದರು.

೨ ಮಿಲಿಯ ಯಹೂದರ ಕೊಲೆ

ಲಂಡನ್ ಏ 20— 1939 ರಿಂದ ಯೂರೋಪಿನಲ್ಲಿ ನಾಜಿಗಳ ನುಗ್ಗಾಟವು ಪ್ರಾರಂಭವಾದಾಗಿನಿಂದ 4 ಮಿಲಿಯ ಯಹೂದ್ಯರು ನಿರ್ನಾಮ ಮಾಡಲ್ಪಟ್ಟಿರುವರು. ಇನ್ನೂ 5 ಮಿಲಿಯ ಮಂದಿ ಇದೇ ಅನಾಹುತಕ್ಕೆ ಒಳಗಾಗುವ ಸ್ಥಿತಿ ಬಂದಿದೆ. ಇವರಡು ಸಂಖ್ಯೆಯು ಸೇರಿ ಪ್ರಪಂಚದ ಯಹೂದ್ಯರ ಸಂಖ್ಯೆಯಲ್ಲಿ ಆರ್ಧವಾಗುವುದು. ಎಲ್ಲ ವಿಷಯವೂ ಅಕ್ರಮಿತ ರಾಜ್ಯಗಳಲ್ಲಿನ ಜನರ ಸ್ಥಿತಿಗತಿ ಬಗ್ಗೆ ಇಂಟರ್ ಆಲಿಯಡ್ ಇಂಫರ್ಮೇಷನ ಕಮಿಟಿಯವರು ಪ್ರಕಟಿಸಿರುವ ವರದಿಯಲ್ಲಿ ತಿಳಿಯಪಡಿಸಲ್ಪಟ್ಟಿದೆ.

.... ಶಾಂತಿ ನೆಲಸಬೇಕಾದರೆ ....

ಮಿ॥ ಈಡನ್‌ರವರು ಹೇಳುವುದು— ಪ್ರಪಂಚದಲ್ಲಿ ಶಾಂತಿ ನೆಲಸಬೇಕಾದರೆ ಜರ್ಮನಿ, ಇಟಲಿ, ಜಪಾನ್ ಈ ಮೂರವರನ್ನು ಶಸ್ತ್ರಾಸ್ತ್ರವಿಲ್ಲದವರನ್ನಾಗಿ ಮಾಡಿ ಆಗ ಪ್ರಪಂಚಕ್ಕೆ ನೆಮ್ಮದಿ, ಯಂದು. ಈ ಜನರಿಂದಲೇ ಯುದ್ಧ. ಶಸ್ತ್ರಾಸ್ತ್ರದಿಂದ ಯುದ್ಧವಲ್ಲವಂತೆ. ಕೈಜರ್ ಚಕ್ರವರ್ತಿಯವರ ಜರ್ಮನಿಯನ್ನು ಶಸ್ತ್ರರಹಿತರನ್ನಾಗಿ ಮಾಡಿದರಿ, ಯುದ್ಧ ನಿಂತಿತೆ! ಆಡಾಲ್ಫ್ ಹಿಟ್ಲರನು ಹುಟ್ಟಿದನ್ನು ಈಗ ಈ ಯುದ್ಧವನ್ನು ಗೆದ್ದು ಹಿಟ್ಲರನ್ನು ಗಲ್ಲಿಗೇರಿಸಿ. ಜರ್ಮನಿಯವರನ್ನು ಶಸ್ತ್ರಾಸ್ತ್ರವಿಲ್ಲವರನ್ನಾಗಿ ಮಾಡುತ್ತೀರೆಂದು ನಂಬೋಣ ಆಗಲೂ ಮತ್ತೊಂದು ಜರ್ಮನಿಯು ಉದ್ಭವವಾಗುತ್ತದೆ ಆಗಲೂ ಈ ಹೊಸ ಜರ್ಮನಿಯು ಶಾಂತಿ ನೆಲೆಸುತ್ತದೆ. ಎನ್ನುವುದಕ್ಕೆ ಏನು ನಿರ್ಧಾರ. ದೇವರನ್ನು ಮಿ॥ ಈಡನ್‌ರವರು ಎದುರಿಸಿ ತಮಗೆ ಬೇಕಾದ್ದನ್ನೆಲ್ಲಾ ಮಾಡಿಕೊಳ್ಳಬೇಕು, ಆಗ ಮಾತ್ರ ಇವರ ಇಷ್ಟ ಸಿದ್ಧಿಯಾಗುವುದು, ಅಮೆರಿಕ ಮುಖ್ಯಸ್ಥರು ಹೇಳುವುದು ಸುಯೆಂದು ಕಾಣುತ್ತೆ. ಯುದ್ಧವನ್ನೇ ತೊಲಗಿಸಬೇಕು. 'ದಾರಿದ್ರ ನಾಶಮಾಡಿ, ಅಸೆಬಿಡಿ ಎಲ್ಲಾ ನಮಗೆ ಎನ್ನ ಬೇಡಿ ತಡೆಕಟ್ಟುವುದನ್ನು ಬಿಡಿ, ಎಲ್ಲಾ ರಾಷ್ಟ್ರಗಳನ್ನೂ ಸಮಭಾವದಿಂದ ನೋಡಿ ಮೂರು ರಾಜ್ಯಗಳಾದ ಇಂಗ್ಲೆಂಡ್, ಅಮೆರಿಕ, ರಷ್ಯ, ಇವೇ ಇವೆಲ್ಲವನ್ನೂ ಮಾಡಲಾರವು ಈಗ ಹೊಸದಾಗಿ ಏರ್ಪಡಿಸಬೇಕೆಂದಿರುವ ಯೂರೋಪ್ ಏಸ್ಸೆಂಬ್ಲಿ ಕೌನ್ಸಿಲ್‌ಗಳು ಏನು ಮಾಡಲಾರದು. ಇದು ಜಿನಿವ ಲೀಗ್‌ಗಿಂತ ಸ್ವಲ್ಪ ಉತ್ತಮಗೊಳ್ಳಬಹುದು ಅದರೇನು? ಹಿಂದಿನ ಜಿನಿವ ಲೀಗ್ ಮಾಡಿದ ತಪ್ಪನ್ನು ಈ ಹೊಸ ಜಿನೀವ ಲೀಗು ಸರಿಪಡಿಸುವುದೇ? ಮಿ॥ ಈಡನ್‌ರವರು ಹುಲಿಯ ಉಗುರನ್ನು ಕತ್ತರಿಸಬಹುದು, ಅದರ ಬಾಯಿನ್ನು ಕಟ್ಟಬಹುದು. ಆದರೆ ಹುಲಿಯು ಇದ್ದೇ ಇರುವುದು ಈ ಹುಲಿಯನ್ನು ನೀವು ಮಾಡಲಾರಿರಿ; ಯಾವ ಜೋನಿನಲ್ಲಿ ಕೂಡಲಾತರಿ ಹುಲಿ ಇಲ್ಲದ ಪ್ರಪಂಚ ಮಾಡುವುದು ಒಳ್ಳೇದು. ಪ್ರಪಂಚದಲ್ಲಿ ಪೋಲೀಸಿನವರೂ ಕೂಡ ಆಯುಧ ಇಟ್ಟುಕೊಳ್ಳದ ರೀತಿಯಲ್ಲಿರಲು ಎಲ್ಲರೂ ಸಭ್ಯ ರೀತಿಯಲ್ಲಿರುವಂತೆ ಮಾಡುವುದು ಒಳ್ಳೆಯದು.

ಕೇಪ್‌ಟೌನಿನಲ್ಲಿ ಭಾರತೀಯ ವಿರುದ್ಧ ಕಾನೂನು ಜಾರಿಗೆ ತರಲು ಪ್ರಯತ್ನಿಸುತ್ತಿರುವುದಕ್ಕೆ ಇಂಡಿಯಾವಲ್ಲೂ ದಕ್ಷಿಣ ಆಫ್ರಿಕಾದಲ್ಲೂ ಖಂಡನಾ ಸಭೆಗಳಾಗುತ್ತಿರುವುವು. ಕೇಪ್‌ಟೌನಿನ ಪಾರ್ಲಿಮೆಂಟಿನಲ್ಲಿ ಮಸೂದೆಯು ಕಮಿಟಿಯಲ್ಲಿ ಮಂಜೂರಾಯಿತು. ಇನ್ನು 3 ನೇ ಓದುವಿಕೆಯಾಗುವುದೇ ಬಾಕಿಯಿದೆ

ಹಿಂದೆ ಯೋಚಿಸಿದ್ದಂತೆ ಕಳೆದ ಮಂಗಳವಾರ ಹಿಟ್ಲರನ 54 ನೇ ಹುಟ್ಟಿದ ದಿವಸ ಪದ್ಧತಿಯ ವೇರೆ ಹಿಟ್ಲರನ ಭಾಷಣವಾಗಲಿಲ್ಲ. ಹಿಂದಿನ ದಿವಸವೇ ಡಾ| ಗೋಬಲ್ಸನು ಭಾಷಣ ಮಾಡಿದನು

ರಾಜಕೀಯ ಖೆದಿಗಳ ಬಿಡುಗಡೆಯ

ಬಂಧಿತರಾಗಿರುವ ಮೈಸೂರು ಕಾಂಗ್ರೆಸ್ಸಿನವರನ್ನು ಮೈಸೂರು ಸರಕಾರದವರು ಬಿಡುಗಡೆ ಮಾಡುವ ಯೋಜನೆಯಲ್ಲಿದ್ದಾರೆಂದು ಹೇಳಲಾಗಿದೆ. ದೇಶದ ಪರಿಸ್ಥಿತಿಯು ಎಷ್ಟಾಧಾರಣವಾಗಿರುವುದೂ ಬೆಂಗಳೂರು ಕಂಟೋನ್ಮೆಂಟಿನಲ್ಲಿದ್ದು ಎಲ್ಲಾ ಜೆಟನ್ನಾಗಳೂ ಬಿಡುಗಡೆ ಮಾತಾಡ್ಪಿಟ್ಟಿರುವುದೂ, ದಸ್ತಗಿರಿಗೆ ಮುಂಚೆ ಕಾಂಗ್ರೆಸ್ಸಿನವರ ಆಶಯವು ರಚನಾತ್ಮಕ ಕಾರ್ಯಕ್ರಮವನ್ನು ನಡೆಸುವುದಾಗಿದ್ದು ಯುದ್ಧಕಾಲವಲ್ಲಿ ಜವಾಬ್ದಾರಿ ಸರಕಾರಗಳೆಯಲು ವಿರೋಧ ಚಳುವಳಿಯಲ್ಲವಾಗಿದ್ದುದೂ, ಕಾಂಗ್ರೆಸ್ಸಿನವರ ಪೆರೂ ಲ ಮೇಲೆ ಬಿಡುಗಡೆ ಹೊಂದಿದ್ದು ಏನೂ ರಾಜಕೀಯ ತೊಂದರೆ ಉತ್ಪತ್ತಿಯಾಗದಿರುವುದೂ, ಮತ್ತು ಒಂಭತ್ತರಾಗಿರುವ ಅನೇಕ ಪ್ರಮುಖ ಕಾಂಗ್ರೆಸ್ಸಿಗರು ಜೂನ್ ತಿಂಗಳಲ್ಲಿನ ಬಜೆಟ್ಟಿಲಿ ಅಧಿವೇಶನದಲ್ಲಿ ಹಾಜರಾಗಲು ಅನುಕೂಲವಾಗಲೂ ಈ ಯೋಜನೆಯು ಕೈಕೊಳ್ಳಲಾಗಿದೆಯೆಂದು ತಿಳಿಯಬಂದಿದೆ.

ಮಿ॥ ಫಿಲಿಪ್ಸ್ ಮತ್ತು ಕಾಂಗ್ರೆಸ್ಸಿನವರೂ

ವಾಷಿಂಗ್ಟನ್ನಿನ ಒಂದು ಪತ್ರಿಕೆಯಲ್ಲಿ ಹೀಗೆ ಬರೆಯಲಾಗಿದೆ— ಮಿ॥ ಫಿಲಿಪ್ಸ್ರ ಪ್ರವಾಸವು ಮುಗಿಯಿತು. ಇನ್ನೇನು ಸ್ವದೇಶಕ್ಕೆ ಹಿಂತಿರುಗಿ ಮಿ॥ ಚರ್ಚಿಲ್ಲರಿಗೆ ವರದಿ ಒಪ್ಪಿಸುತ್ತಾರೆ ಇವರು ಜೈಲಿನಲ್ಲಿರುವ ಮುಖಂಡರನ್ನು ನೋಡಲಿಲ್ಲ. ಬ್ರಿಟಿಷ್ ರಾಜ್ಯಕ್ಕೆ ಕಂಟಕಪ್ರಾಯವಾಗಿದ್ದ ವೈಸರಾಯರು, ಜನರಲ್ ವೇವಲರು, ಮುಂಬಾಯಿ ಕಲ್ಕತ್ತಾ ವರ್ತಕಮಂಡಲಿಯವರನ್ನು ನೋಡಿದ್ದರು. ಬ್ರೋಸ್ಟ್ ಟೀ ಪಾರ್ಟಿಯಲ್ಲಿ ಪ್ರಸಾಜಾನೆಟ್ಟಿಸಲ್ಲಿರುವ ಬ್ರಿಟಿಷ್ ಗೌರ್ನರಂತೆ ಇವರು. ಇಂಡಿಯಾದ 30 ಕೋಟಿ ಜನರ ಮುಖಂಡರಾದ ಗಾಂಧಿ, ನೆಹರು ಅಜಾದ್ ಮುಂತಾದವರನ್ನು ನೋಡಲು ಪ್ರಯತ್ನಿಸಲಿಲ್ಲ ಅವರೆಲ್ಲಾ ಜೈಲಿನಲ್ಲಿದ್ದಾರೆ, ನೋಡಲು ಆಗಲಿಲ್ಲ, ಏನ್ಮಹಪ್ಪುದು. ಅನೇರಿಕಾ ರಾಯಭಾರಿಯಾದ ಇವರು ಪ್ರಯತ್ನಪಟ್ಟಿದ್ದರೆ ಆಗುತ್ತಿತ್ತು ; ಮಿ॥ ಚರ್ಚಿಲ್ಲರು ಇವರಿಗೆ ಅಪ್ಪಣೆ ಕೊಡದಿರುತ್ತಿರಲಿಲ್ಲ. ಹಿಂದೆ ಬಂದಿದ್ದ ಕರ್ನಲ್ ಜಾರ್ಜ್ ಮುಖಂಡರನ್ನು ನೋಡಲಿಲ್ಲವೇ ?

ಇಂಗ್ಲೆಂಡಿನ ಬಜೆಟ್

ಇಂಗ್ಲೆಂಡಿನ ಬಜೆಟ್ಟನ್ನು ಈಗ ಪ್ರಕಟಿಸಿರುವರು. ಈ ಬಜೆಟ್ಟಿನ ವಿಷಯದಲ್ಲಿ ಅಲ್ಲಿಯವರು ಗೊಣಗುಟ್ಟುವ ಹಾಗಿಲ್ಲವೆಂಬ ತಿಳಿದುಕೊಂಡಿರುವರು. ಉತ್ಪತ್ತಿ 2907 ಮಿಲಿಯನ್ ಪೌಂಡು. ಖರ್ಚು 6000 ಮಿಲಿಯನ್ ಪೌಂಡು. ಹಿಂದಿನ ವರ್ಷದ ಉತ್ಪತ್ತಿಯ ಅರ್ಧವಷ್ಟು ಇಷ್ಟಕಂ ಟ್ಯಾಕ್ಸಿನಿಂದ ವಸೂಲಾಗಿತು. ವಾರಕ್ಕೆ ೨ ರಿಂದ 12 ಪೌಂಡು ವರೆಗಿನ ಆದಾಯದವರಿಗೆ ಸ್ವಲ್ಪ ತೆರಿಗೆಯನ್ನು ಕೊಡುತ್ತಿದ್ದರು. ಟೀ, ಬೀರ್ ಮತ್ತು ಹೊಗೆಸೊಪ್ಪು ಈ ಪದಾರ್ಥಗಳ ಮೇಲಿನ ತೆರಿಗೆಯನ್ನು ಸಂತೋಷವಾಗಿ ಕೊಡುತ್ತಿದ್ದರು. ಪರ್ಚೇಸ್ ತೆರಿಗೆ, ಕಮ್ಮಿ ಆದಾಯದವರಿಗೆ ಕಮ್ಮಿ, ಹೆಚ್ಚು ಆದಾಯವುಳ್ಳವನಿಗೆ ಹೆಚ್ಚಾಗಿ ಆದರೂ ಸಹ ಗೊಣಗಾಲು ಇಲ್ಲವಾನೇ ಇರಲಿಲ್ಲ. ಯುದ್ಧಕ್ಕೆ ಮುಂಚೆ ಆದಾಯದಲ್ಲಿ 42 ಇದ್ದದ್ದು ಈಗ 56 ಕ್ಕೆ ಏರಿದೆ. ಸಾಲನ್ನಾದರೂ ಜನರ ಉಳಿತಾಯವೂ ದೇಶಕ್ಕೆ ಉಪಕಾರವಾಗಿದಂತಾಯಿತು.

ಆಂಗ್ಲೇಯ ಜನರಿಗೆ ಊಟ, ತೊಡಿಗೆ ಮತ್ತು ವಾಸ ಇವುಗಳಲ್ಲಿ ಸುಖವಾಗಿರುವರೆನ್ನಬಹುದು. ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವರು, ಯುದ್ಧದಿಂದ ವಿದ್ಯಾಭ್ಯಾಸದ ಕಡೆಗೆ ಅಲಕ್ಷ್ಯ ಕೊಡಲಿಲ್ಲ. ಯುದ್ಧದಿಂದ ಕಾರ್ಖಾನೆಗಳೂ ವ್ಯವಸಾಯವೂ ಅಭಿವೃದ್ಧಿಯಾಯಿತು. ಅನೇಕ ಹೊಸ ಉದ್ಯೋಗಗಳೂ ಏರ್ಪಟ್ಟುವು ಇದರಿಂದ ದೇಶದ ಸಂಪತ್ತು ಬೆಳೆಯಿತು. ರಾಜಾದಾಯವು ಹೆಚ್ಚಿತು. ಇಂಡಿಯಾ ಸೈನ್ಯದ ಖರ್ಚು ಹೊರಗಡೆ ಇದ್ದಾಗ ಬ್ರಿಟಿಷ್ ಗವರ್ನಮೆಂಟೇ ಕೊಡುವುದೆಂದು ಹೇಳಲಾಗಿದೆ ಇಂಡಿಯಾ ವಿಷಯವಲ್ಲಿದ್ದಾಗ ಅದರ ಖರ್ಚು ಇಂಡಿಯಾಕ್ಕಂತೆ. ಬರ್ಮಾ ಮುಂತಾದುವನ್ನು ಗೆಲ್ಲುವುದಕ್ಕೆ ಇಂಗ್ಲೆಂಡಿನಲ್ಲಿ ಪ್ರಜೆಗಳಿಗೆ ಫಾಬರಿಯಾಗುವುದೆಂದು ಯುದ್ಧ ಪ್ರಾರಂಭದಲ್ಲಿ ಹೆಚ್ಚು ತೆರಿಗೆಯನ್ನು ಹಾಕುತ್ತಿರಲಿಲ್ಲ. ಕೆಲಸಗಾರರ ಸಂಖ್ಯೆ ಹೆಚ್ಚಿದ ಹಾಗೆ ತೆರಿಗೆ ಏರುತ್ತಾ ಬಂದಿತು. 1938 ನೇ ಅಕ್ಟೋಬರ್‌ನಲ್ಲಿ ಇಂಗ್ಲೆಂಡಿನಲ್ಲಿ ಒಬ್ಬ ಕೂಲಿಯವನು 69 ಷಿಲಿಂಗ್ ಸಂಪಾದನೆ ಮಾಡುತ್ತಿದ್ದನು. 1942 ಜನವರಿಯಲ್ಲಿ 102 ಷಿಲಿಂಗಿಗೆ ಏರಿತು. ಇದಲ್ಲದೆ ಶೇಕಡ 48 ರಂತೆ ಆದಾಯ ತೆರಿಗೆ ಆಹಾರ ಪದಾರ್ಥ ಶೇಕಡ 30 ರಂತೆ ಮಾತ್ರ ಹೆಚ್ಚಿತು. ಇಂಡಿಯಾ ವಿಷಯ ಗಮನಕ್ಕೆ ತಂದು ಕೊಂಡರೆ ಕೂಲಿ ಹೆಚ್ಚಲಿಲ್ಲ. ಸದಾರ್ಥದ ಬೆಲೆ ಬಂದಕ್ಕೆ ಎರಡರಷ್ಟು ಮೂರಷ್ಟು ಹೆಚ್ಚಿದೆ. ಆಹಾರದ ಬೆಲೆ ಆಸ್ಟ್ರೇಲಿಯಾದಲ್ಲಿ ಶೇಕಡ 15, ಕೆನಡ 17, ನ್ಯೂಜಿಲೆಂಡ್ 10, ದಕ್ಷಿಣ ಆಫ್ರಿಕಾ 15 ಅಮೆರಿಕಾ 18 ಈ ಪ್ರಕಾರ ಹೆಚ್ಚಿದೆ. ಯುದ್ಧದಿಂದ ಇಂಡಿಯಾ ಏಷ್ಟನಷ್ಟಿಗೆ ಬಂದಿದೆ ಎಂಬುದನ್ನು ಯಾರೂ ಮರೆಯುವ ಹಾಗಿಲ್ಲ. ಇಂಗ್ಲೆಂಡಿನಲ್ಲಿ ಜನರು ಆಸ್ತಿಯನ್ನು ಖರ್ಚುಮಾಡದೆ ಸಂಪಾದನೆಯಿಂದ ಜೀವಿಸುವ ಹಾಗೆ ಸರ್ಕಾರವರು ನೋಡಿಕೊಳ್ಳುವರು. ಇಲ್ಲಿ ಆ ಸ್ಥಿತಿಯಿಂದಲೇ ಜೀವನ ಜೀಕು

ವಿವಿಧ ವರ್ತಮಾನ

ಜನರಲ್ ಜಿರೋರವರು ತಮ್ಮಲ್ಲಿ ಈಗ 40 ಲಕ್ಷ ಫ್ರೆಂಚ್ ಸೈನ್ಯವು ವುದೆಂದೂ, ಜೇಕಾದರೆ ಫ್ರಾನ್ಸಿನ ಮುತ್ತಿಗೆಗೆ 3 ಲಕ್ಷವನ್ನು ಕಳುಹಿಸುವೆವೆಂದೂ ಹೇಳಿರುವರು.

ಜಿಪ್ಸಿಕರ ಸಮಸ್ಯೆ ವಿಷಯದಲ್ಲಿ 26 ನೇ ತಾರೀಖಿನಲ್ಲಿ ಬೆಂಗಳೂರಿನಲ್ಲಿ ಅಜೈರ್ ತೀರ್ಮಾನಕ್ಕೆ ಒಂದು ಸಮಿತಿಯವರು ಸರ್ಕಾರಕ್ಕೆ ವರದಿ ಒಪ್ಪಿಸುವರು.

ಸ್ಮೋಲೆನ್ಸ್ಕ್ ನಗರವನ್ನು ಹಿಡಿದುಕೊಂಡಾಗ ೧೦ ಸಾವಿರ ಪೋಲಿಷ್ ಜನರ ಆಸ್ತಿಗಳು ತಮಗೆ ಪತ್ತೆಯಾಯಿತೆಂದೂ ಹೆಣಗಳ ಬಟ್ಟೆಯಲ್ಲಿದ್ದ ಹೆಸರುಗಳಿಂದ ಇವರೆಲ್ಲರು ಪೋಲೆಷ್ಟರವರೆಂದು ಇವರನ್ನು ರೆಸ್ಕ್ಯೂ ಕೊಂದು ಹೂಳಿದ್ದರೆಂದೂ ಜರ್ಮನಿಯವರು ಹೇಳುವರು. ರಷ್ಯಾದವರು ಈ ಕೆಲಸ ಜರ್ಮನಿಯವರೇ ಮಾಡಿ ತಮ್ಮ ಮೇಲೆ ಸುಳ್ಳು ಆಪವಾದನೆ ಮಾಡಿದರೆನ್ನುವರು.

ಜಪಾನಿಯರ ಸೈನ್ಯವು ಮೂಡಿ ತಿಂಗಳಲ್ಲಿದ್ದಕ್ಕಿಂತ ಈಗ ಏಸರೀಕ ಹೆಚ್ಚಿತೆಂದೂ ಅಲ್ಲದೆ ಗುಂಡಗಳನ್ನು ಅನೇಕ ಕಡೆ ಇಟ್ಟಿರುವರೆಂದೂ ಅನುಕೂಲವಾದ ಏರ್ಪಾಡುಗಳಿಂದ ಗೊತ್ತಾಗುವುದು.

ಆಫ್ರಿಕಾದ ಭಾರತದ ಏಂದ್ದ ಮಿ॥ ಆಮೆಯವರು ಪ್ರಾರ್ಥನಾಪತ್ರ ಓದಿಸಿದರು. ಹಿಂದೂಸ್ಥಾನದ ಸೈನಿಕರು ಆಫ್ರಿಕಾದಲ್ಲಿ ಅಬಿಸೀನಿಯಾ ಮುಂತಾದ ಪ್ರದೇಶಗಳನ್ನು ಗೆದ್ದು ಬಳಿ ಜನರಿಗೆ ಸಹಾಯಮಾಡಿರುವರು ಇಂಥಾ ಕಾಲದಲ್ಲೂ ದಕ್ಷಿಣ ಆಫ್ರಿಕಾದ ಬಳಿ ಜನರು ಈರೀತಿ ನಡೆಯುತ್ತಿರುವುದು ಸರಿಯಲ್ಲವೆಂದರು.

ವೈಸೂರು ಶಾಸನ ಸಭೆಯ ಅಧ್ಯಕ್ಷರಾದ ಶ್ರೀ ಡಿ. ಹೆಚ ಚೆಂದ್ರಶೇಖರಯ್ಯನವರಿಗೆ 750 ರಿಂದ 1250 ರೂಪಾಯಿಗಳಿಗೆ ಸಂಬಳ ಬಡ್ತಿಯಾಗಿದೆ.

ಈಚೆಗೆ ಜಿಗೋಸ್ಲೋವಿಯಾದಲ್ಲಿ ಸ್ಕೊಡ ಕಾರ್ಖಾನೆಗೆ ಧಾಳಿ ಮಾಡಿದರಷ್ಟೆ. ಇಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಕಾರ್ಖಾನೆಯು ನಷ್ಟವಾಯಿತೆಂದು ತಿಳಿಯಬರುತ್ತೆ.

ರಾಯಚೂರಿನಲ್ಲಿರುವ ಕೆಲಸಗಾರರು ಇನ್ನು ಮುಂದೆ ಹೆಂಡವನ್ನು ಕುಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿರುತ್ತಾರೆ

ಮುಂಬಯಲ್ಲಿಯ 14 ಗಣ್ಣು ಪ್ರಜೆಗಳು ಜನರಲ್ ಸ್ಮಟ್ಸ್‌ರವರಿಗೆ ಭಾರತೀಯರ ಮೇಲಿನ ನಿರ್ಬಂಧದ ವಸೂಲಿಯನ್ನು ವಜಾಮಾಡಬೇಕೆಂದು ತಂತೀ ಕಳುಹಿಸಿರುತ್ತಾರೆ. ಆದರೂ ಈ ವಸೂಲಿಯು ಎರಡನೇ ಸಲ ಒಪ್ಪಿಗೆಯಾಯಿತು ಡಾ॥ ಮಾಲಕ್‌ರವರು ಪ್ರತಿಭಟಿಸಿದರು.

ಬೊಂಬಾಯಿನಲ್ಲಿ ಹೈಸ್ಕೂಲು ಪುಸ್ತಕಗಳಿಗೆ ಶೇಕಡ 49, ಮಿಡಲ್ ಮತ್ತು ಅಪ್ಪರ್ ಪ್ರೈಮರಿ ಪುಸ್ತಕಗಳಿಗೆ 40 ಪ್ರೈಮರೀ ಪುಸ್ತಕಕ್ಕೆ 52ವರೆಯಂತೆ ಬೆಲೆ ಹೆಚ್ಚಿಸಲು ಸರ್ಕಾರದವರು ಆಜ್ಞಾಪಿಸಿರುತ್ತಾರೆ,

ಹೆಟ್ಲರದ ವರ್ಧಂತಿಯನ್ನು ಇವತ್ತು ಜರ್ಮನಿಯಲ್ಲಿ ಆಚರಿಸುವರು. ಈ ಸಮಯದಲ್ಲಿ ಹಿಟ್ಲರು ಒಂದು ಭಾಷಣ ಮಾಡುವನಂತೆ. ಅದರಲ್ಲಿ ಯೂರೋಪಿನ ಹೊಸ ರಾಜ್ಯಗಳು ಯಾವ ರೀತಿಯಿಂದ ನಡೆಯಬೇಕೆಂದು ವರ್ಣಿಸುವನಂತೆ.

ಅಮೆರಿಕಾವು ಹತ್ತನೇ ಎಮಾನ ದಳದ ಜನರಲ್‌ರವರು ಬರ್ಮಾದಲ್ಲಿ ಜಪಾನಿಯರ ವಿಮಾನ ದಳವು ಹೆಚ್ಚಿದೆಯೆಂದೂ ಅವರ ಕಾರ್ಯಾಚರಣೆ ಅಧಿಕವಾಗಿದೆ ಎಂದು ಹೇಳಿದರು. ಇವರು ಹೇಳುವ ಕಾರಣವೇನೆಂದರೆ— ಈಚೆಗೆ ಮಿತ್ರಸೈನ್ಯದವರ ಧಾಳಿ ನೋಡಿ ಹೆದರಿರಬಹುದು ; ಇಲ್ಲವೇ ನಮ್ಮ ಮೇಲೆ ಬೀಳಲು ಮಳೆಗಾಲ ಬರುವುದಕ್ಕಿಂತ ವಿಂಚೆ ಸಿದ್ಧತೆ ಮಾಡಿಕೊಂಡಿರಬಹುದು, ಎಂದು. ನಾವು ಅವರನ್ನು ಎದುರಿಸಲು ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡಿರುತ್ತೇನೆ. ಅವರು ಬರುವುದೇ ತಡ ಎಂದು ಒಬ್ಬರ ಪ್ರಶ್ನೆಗೆ ಉತ್ತರಿಸಿದರು. ನಮ್ಮ ಧಾಳಿಯಿಂದ ರಂಗೂನಿನ ಬಂದರು ಉಪಯೋಗವಿಲ್ಲದಂತಾಗಿದೆ ಮಾರ್ಚಿಯಲ್ಲಿ ಇಲ್ಲಿ ನಾವೆಗಳ ಹಿಡಾಟವೇ ಇರಲಿಲ್ಲ. ಅಕ್ಟೋಬರಿಂದ ನಮ್ಮ ವೈಮಾನಿಕರು ನಾಲ್ಕು ವರ್ಷ ಕಾಲ ಸತ್ಕರಿಸಿದರು. 9 ಜನರಿಗೆ ಗಾಯವೆಂದೂ ಹೇಳಿದರು.

The Satyavadi Press

Printers & Binders

Chamarajapuram

Mysore

ಮೈಸೂರು ವೈಶ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ-ತೆಲಗು

ವಾ ಸ ಪ ತ್ರಿ ಕೆ ಗೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 2-4-0

ಬಿಡಿ ಪ್ರತಿ 4 ಆಣೆ.

ಕಾರ್ಯಾಲಯ ;

ಶ್ರೀ ವಾಸವಾಂಬ ಭವನ

ಆಶೋಕ ರಸ್ತೆ — ಮೈಸೂರು

ಬೇಕಾಗಿದೆ

ಸರಿಯಾದ ಸ್ಥಿತಿಯಲ್ಲಿರುವ ಸೆಕಂಡ್ ಹ್ಯಾಂಡ್ ಬೈಸಿಕಲ್‌ಗಳು ಬೇಕಾಗಿವೆ. ನಮ್ಮವರಿಗೆ ಕೆಳಗಿರುವ ಅಡ್ರೆಸ್ಸಿಗೆ ಬಂದು ವಿಚಾರಿಸಿರಿ.

ಸತ್ಯವಾದಿ ಆಫೀಸ್,

ಚಾಮರಾಜಪುರಂ, ಮೈಸೂರು.

Opera — Manonmani

ಅಪೆರಾ

4 ನೆ ಅಮೋಘ ಹಾರ

ಪಿ.ಯು.ಚಿನ್ನಪ್ಪ, ಟಿ.ಆರ್.ರಾಜಕುಮಾರಿ ಶ್ಯಾಮ, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸಕೃಷ್ಣಟಿ.ಎ. ಮಧುರಾ, ಕಾಳಿ ಎಸ್. ರತ್ನಂ. ಮುಂತಾದವರು ಪಾತ್ರ ವಹಿಸಿರುವ

ಮನೋನ್ಮಣಿ

ಮುಂದಿನ ಬದಲಾವಣೆ

ಸಹೇಲಿ

ಹಿಂದೀ ಭಾಷೆ

ಪಹರಿಸನ್ಯಾಲ್, ರತ್ನಾಬಾಯಿ, ಪ್ರಸೂಳ ಮತ್ತು ಯಾಕೂಬ್ ಮುಂತಾದವರು ನಟಿಸಿರುವರು.

Edited, Printed & pnblished by M. S. Krishna Rao, at the Satyavadi Press. Chamaraja Agrahar, Mysore.

New Opera Talkies, Mysore.

MORNING SHOW

From 23—4—43



ಅಕ್ಕರ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

ಶ್ರೀ ರಾಮಚಂದ್ರ ಬುಕ್ ಡಿಪೋ

ದೇವರಾಜ ಮಾರ್ಕೆಟ್, ಮೈಸೂರು

For good printing

Saraswati Printing Press

Lansdowne Buildings, Mysore

Lakshminarasimha Press

Srirampet, Mysore

ಪಿ. ಮಂಜಪ್ಪ ಪೇರ್ಚಿಂಟ್

ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬಿಡಿಗಳನ್ನೆ ಉಪಯೋಗಿಸಿ

ಹಳೇ ಅಗ್ರಹಾರ, ಮೈಸೂರು

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಬರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿ ಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ, ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್ ಗೋಪಾಲ್.

ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು

ಶ್ರೀ 'ಓಂ' ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ದೇಶಾಭಿಮಾನ ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲ್ಪಾಗುವದು

ನಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,

ಮೈಸೂರು ಸರ್ಕಾರದ ಜೀವವಿಮೆ ಇಲಾಖೆ

ಬೆಂಗಳೂರು.